

# ಅನುದಿನದ ಪಲಾಯನ

**ಸಮಾಜದ ನಾಗರಿಕ ಕ್ರೌರ್ಯಗಳನ್ನು ತೆರೆದಿಡುತ್ತಲೇ ಪ್ರೇಕ್ಷಕರ ಪೂರ್ವಗ್ರಹವನ್ನೂ ಬಲವಾಗಿ ಪ್ರಶ್ನಿಸುವ ಕಿರುಚಿತ್ರವಿದು.**

■ ಗೌರಿ

ಅನುಮಾನ ಮತ್ತು ಅವಹೇಳನ ಇವು ಈ ಕಾಲದ ಮಾನಸಿಕತೆಯನ್ನು ಪೀಡಿಸುತ್ತಿರುವ ಬಹುದೊಡ್ಡ ರೋಗಮೂಲಗಳು. ಒಬ್ಬರನ್ನೊಬ್ಬರು ನಂಬಲಾಗದ, ತಮ್ಮ ನಂಬಿಕೆಗಿಂತ ಭಿನ್ನವಾಗಿರುವವರನ್ನು ತುಚ್ಛವಾಗಿ ಕಂಡು ಅವಹೇಳನ ಮಾಡುವ ಪ್ರವೃತ್ತಿ ಬಹುವ್ಯಾಪಕವಾಗಿ ಹರಡಿದೆ. ಈ ಪ್ರವೃತ್ತಿಯ ಕಾರಣಕ್ಕೇ ಸಮಾಜದಲ್ಲಿನ ತಾರತಮ್ಯದ ಹುಣ್ಣು ಕೀವು ತುಂಬಿಕೊಂಡು ಮಿಜಿಗುಡುತ್ತಿದೆ.

ಅನುಮಾನ ಮತ್ತು ಅವಹೇಳನದ ಪರಿಣಾಮ ಏನಾಗಬಹುದು ಎಂಬುದನ್ನು ಬಹುಸೂಚ್ಯವಾಗಿ, ಅಷ್ಟೇ ಧ್ವನಿಪೂರ್ಣವಾಗಿ ಕಟ್ಟಿಕೊಡುವ ಕಿರುಚಿತ್ರ ‘ಪ್ರೊವ್ಲರ್’.

ಪೂರ್ವಗ್ರಹಗಳು ನಮ್ಮನ್ನು, ನಮ್ಮ ಗ್ರಹಿಕೆಗಳನ್ನು, ನಮ್ಮ ಆಯ್ಕೆಗಳನ್ನು ಎಷ್ಟು ಪ್ರಭಾವಿಸುತ್ತಿವೆಯೆಂದರೆ ನಮ್ಮ ವ್ಯಕ್ತಿತ್ವಗಳೇ ಅಂಥ ಪೂರ್ವಗ್ರಹಗಳ ಮೊತ್ತವೇನೋ ಅನಿಸುತ್ತದೆ. ವ್ಯಕ್ತಿ, ವಸ್ತು, ಜನಾಂಗ, ವಿಚಾರಧಾರೆ ಎಲ್ಲದಕ್ಕೂ ನಾವು ನಮ್ಮ ಪೂರ್ವಗ್ರಹಗಳನ್ನು ಸೇರಿಸಿ ಟ್ಯಾಗ್ ಅಂಟಿಸಲು ಸದಾ ಹವಣಿಸುತ್ತಿರುತ್ತೇವೆ. ಇದೊಂದು ರಾಜಕೀಯ, ಸಾಂಸ್ಕೃತಿಕ, ಆ ಮೂಲಕ ಪ್ರಭುತ್ವದ ಪಿತೂರಿಯೂ ಹೌದು. ಇದರಿಂದ ಆ ಟ್ಯಾಗ್ ಅಂಟಿಸಿಕೊಂಡವರ ಬದುಕು ಏನಾಗಬಹುದು ಎಂದು ಯೋಚಿಸುವುದೇ ಇಲ್ಲ. ಅಮೆರಿಕದಲ್ಲಿ ಕಪ್ಪು ಜನರೂ ಹೀಗೆ ಪೂರ್ವಗ್ರಹದ ಹಣೆಪಟ್ಟಿಯನ್ನು ಅಂಟಿಸಿಕೊಂಡೇ ಬದುಕುತ್ತಿರುವವರು. ತಮ್ಮ ಮೂಲನೆಲದಲ್ಲಿಯೇ ಅವರು ‘ಅನ್ಯ’ರಾಗಿ ನರಳುತ್ತ ಇರುವವರು. ಆಧುನಿಕತೆಯ ಸಲಕರಣೆಗಳು, ಹಣ, ಶಿಕ್ಷಣ ಯಾವುದೂ ಈ ಪೂರ್ವಗ್ರಹವನ್ನು ತೊಡೆದುಹಾಕಲು ಸಾಧ್ಯವಾಗಲ್ಲ ಎಂಬುದಕ್ಕೆ ಇತ್ತೀಚೆಗೆ ಅಮೆರಿಕದ ಪೊಲೀಸರು ಒಬ್ಬ ಕಪ್ಪುವರ್ಣೀಯನ ಕತ್ತಿನ ಮೇಲೆ ಕಾಲಿಟ್ಟು ಉಸಿರುಗಟ್ಟಿಸಿ ಸಾಯಿಸಿದ ದುರಂತವೇ ಸಾಕ್ಷಿ.

**ಹೆಸರು:** ಪ್ರೊವ್ಲರ್
**ನಿರ್ದೇಶಕ:** ಉಮರ್ ಮಲಿಕ್
**ಛಾಯಾಗ್ರಹಣ:** ಡೇವಿಡ್ ಲೀ
**ಸಂಗೀತ:** ರಿಚರ್ಡ್ ಎಮರಿ
**ತಾರಾಗಣ:** ಮಾವುರೈಸ್ ಮ್ಯಾಕ್

‘ಪ್ರೊವ್ಲರ್’ ಕಿರುಚಿತ್ರ ಕೂಡ ಒಬ್ಬ ಕಪ್ಪುವರ್ಣೀಯನ ಬದುಕಿನ ಕ್ಷಣಗಳನ್ನು ಗಾಢವಾಗಿ ಸೆರೆಹಿಡಿಯುತ್ತದೆ. ಅದೂ ಒಂದೂ ಮಾತಿಲ್ಲದೇ.

ಈ ಕಿರುಚಿತ್ರದಲ್ಲಿ ಘಟಿಸುವುದು ಇಷ್ಟೆ: ಒಬ್ಬ ಕಪ್ಪು ವರ್ಣಿಯ ನಡುರಾತ್ರಿ ಒಂದು ಕಟ್ಟಡದಿಂದ ಹೊರಬಿದ್ದು ನಡೆದುಕೊಂಡು ತನ್ನ ಮನೆಗೆ ಹೋಗುತ್ತಾನೆ. ಆ ನಡಿಗೆಯಲ್ಲಿಯೇ ನಿರ್ದೇಶಕರು ಅವನ ಸ್ಥಿತಿಯನ್ನು ಗಾಢವಾಗಿ ಕಟ್ಟಿಕೊಡುತ್ತ ಹೋಗುತ್ತಾರೆ. ರಾತ್ರಿ ನಿರ್ಜನ ರಸ್ತೆಯಲ್ಲಿ ನಡೆಯುವಾಗ ನಮಗೆಲ್ಲ ‘ಯಾರಾದರೂ ಕಳ್ಳರು ಬಂದರೆ’ ಎಂದು ಭಯವಾಗುವುದು ಸಹಜ. ಆದರೆ ಇಲ್ಲಿ ಹಾಗಲ್ಲ. ‘ಯಾರಾದರೂ ನನ್ನನ್ನು ಕಳ್ಳ ಎಂದುಕೊಂಡರೆ’ ಎಂಬ ಭಯದಲ್ಲಿಯೇ ಅವನು ನಡೆಯುತ್ತಿರುತ್ತಾನೆ. ಎದುರಿನಲ್ಲಿ ಯಾರಾದರೂ ಸಿಕ್ಕರೆ ಒಮ್ಮೆಲೇ ಅವನ ಮುಖದಲ್ಲಿ ಭಯ ಕಾಣಿಸಿಕೊಳ್ಳುತ್ತದೆ. ತಪ್ಪು ಮಾಡಿ ಓಡಿಬಂದವನ ಹಾಗೆ ತಲೆ ತಗ್ಗಿಸಿಕೊಂಡು ತಪ್ಪಿಸಿಕೊಂಡು ಹೋಗುತ್ತಾನೆ. ಪೊಲೀಸ್ ವಾಹನದ ಸೈರನ್ ಕಿವಿಗೆ ಬಿದ್ದರೆ ಅವನ ಹೃದಯ ಬಾಯಿಗೆ ಬರುತ್ತದೆ. ದಾರಿಯಲ್ಲಿ ಹುಡುಗಿಯೊಬ್ಬಳು ನಡೆದುಕೊಂಡು ಹೋಗುತ್ತಿದ್ದರೆ ಅವಳನ್ನು ದಾಟಿ ಹೋಗುವಾಗ ಇವನಿಗೆ ಮೈ ನಡುಗುತ್ತದೆ.

ಇಷ್ಟಕ್ಕೂ ಅವನು ಮಾಡಿರುವ ತಪ್ಪಾದರೂ ಏನು? ಏನೂ ಇಲ್ಲ. ಒಂದು ಸಮುದಾಯ ಇನ್ನೊಂದು ಸಮುದಾಯವನ್ನು ಅನುಮಾನದಿಂದ ಕಂಡು, ಬಿಂಬಿಸಿದ ಪರಿಣಾಮದ ಬಲಿಪಶುವಷ್ಟೆ ಅವನು. ಅವನ ಭಯದ ಮೂಲಕ ನಿರ್ದೇಶಕರು ಬಿಳಿಯರ ಸಮಾಜದ ಕ್ರೌರ್ಯವನ್ನು, ಅಲ್ಲಿ ಅನುಮಾನದ ಶೂಲ ಹೊತ್ತು ಬದುಕುತ್ತಿರುವ ಕರಿಯರ ಸಂಕಟವನ್ನು ತೀವ್ರವಾಗಿ ಕಟ್ಟಿಕೊಡುತ್ತ ಹೋಗುತ್ತಾರೆ.

ಇಷ್ಟೇ ಅಲ್ಲ, ನಿರೂಪಣಾ ಕ್ರಮದ ಮೂಲಕವೇ ನೋಡುಗರ ಪೂರ್ವಗ್ರಹವನ್ನೂ ಪ್ರಶ್ನಿಸುತ್ತಾರೆ. ನಡುರಾತ್ರಿ ಯಾರೋ ಒಬ್ಬ ಕಣ್ಣುಗಳಲ್ಲಿ ಭಯ, ಮೈಯಲ್ಲಿ ನಡುಕವಿಟ್ಟುಕೊಂಡು ಸುಳಿದು ಹೋದರೆ (ಅದರಲ್ಲಿಯೂ ಅವನು ಬ್ಲ್ಯಾಕ್) ಅವನು ಯಾವುದೋ ಕ್ರೈಂ ಮಾಡಿದ್ದಾನೆ ಎಂದು ನಮ್ಮ ಮನಸ್ಸು ಗ್ರಹಿಸಿ ಬಿಡುತ್ತದಲ್ಲ... ಅವನು ಏನು ಮಾಡಿರಬಹುದು ಎಂದು ಊಹಿಸಲು ಶುರುವಾಗುತ್ತದಲ್ಲ, ಪೊಲೀಸರು ಅವನನ್ನು ಹಿಡಿದು ತದುಕುವ ಗಳಿಗೆಗಾಗಿ ಕಾಯಲಾರಂಭಿಸುತ್ತದಲ್ಲ.. ಈ ಪೂರ್ವಗ್ರಹಗಳನ್ನು ನಿರ್ದೇಶಕರು ಪ್ರಶ್ನಿಸುತ್ತಾರೆ. ಇದಕ್ಕೆ ನಾವು ಊಹಿಸಿರದ ಇನ್ನೊಂದು ಆಯಾಮ ಇರಬಹುದು ಎಂಬುದನ್ನು ಸೂಚಿಸುತ್ತಾರೆ.

ಹಾವು ಕಡಿಯುವುದಷ್ಟೇ ಹೊರಜಗತ್ತಿಗೆ ಗೊತ್ತಾಗುತ್ತದೆ; ಮನುಷ್ಯ ಅದರ ಬಾಲತುಳಿದ ನೋವು, ಆ ಕ್ಷಣದಲ್ಲಿ ವಿಷಕಕ್ಕಲು ಕಾರಣವಾದ ಜೀವಭಯ ಅದಕ್ಕೆ ಮಾತ್ರ ಗೊತ್ತಿರುತ್ತದಲ್ಲವೇ? ಇದು ಹೊಡೆಸಿಕೊಂಡ ಹಾವಿನ ಭಯವನ್ನು ಕಾಣಿಸುವ ಕಿರುಚಿತ್ರ.

ಈ ಕಿರುಚಿತ್ರ ವೀಕ್ಷಣೆಗೆ
bit.ly/3c6PH7V
ಕೊಂಡಿ/ಕ್ಯೂಆರ್ ಕೋಡ್
ಸ್ಕ್ಯಾನ್ ಮಾಡಿ.